ರಾಜಕೀಯ, ಸಬಲೀಕರಣ, ಮೊದಲಾದ ಒಂದೇ ವಿಷಯಗಳ ಬಗ್ಗೆ ಲೇಖಕಿಯರು ಬರೆದಾಗಲೂ, ಅನುಭವಗಳಲ್ಲಿ ಮತ್ತು ಬರವಣಿಗೆಯ ಶೈಲಿಯಲ್ಲಿ ಪ್ರತಿಯೊಬ್ಬರೂ ಭಿನ್ನವಾಗಿ ನಿಲ್ಲುತ್ತಾರೆ. ಬಹುತ್ವವನ್ನು ಅಳಿಸಿಹಾಕಲು ಕಾದಿರುವ ಏಕರೂಪ ನಾಗರಿಕ ಸಂಹಿತೆಯಿಂದ ತಪ್ಪಿಸಿಕೊಳ್ಳಲು ಧ್ವನಿಗಳ ವೈವಿಧ್ಯ ಅತ್ಯುತ್ತಮ ದಾರಿಯಾಗಿದೆ.

◆ **ಇಂಗ್ಲಿಷ್ ಗೊತ್ತಿಲ್ಲದ, ಗೊತ್ತಿದ್ದರೂ ಸ್ಥಳೀಯ ಭಾಷೆಯಲ್ಲಿ ಮಾತ್ರ ಕಥೆ-ಕವನ ಬರೆಯುವ ಲೇಖಕರ ಬಗ್ಗೆ ಏನು ಹೇಳುವಿರಿ? ಮಾತೃಭಾಷಾ ಸಾಹಿತ್ಯಕ್ಕೆ ಓದುಗರ ಪ್ರೋತ್ಸಾಹ ಇದೆಯೇ?**

ಸಹ ಲೇಖಕರ ಬಗ್ಗೆ ನಾನು ಮಾತನಾಡಲು ಹೋಗುವುದಿಲ್ಲ ಮತ್ತದು ಆರೋಗ್ಯಕ್ಕೆ ಒಳ್ಳೆಯದೂ ಅಲ್ಲ. ಅಕೋಲಿ ತಾಯ್ನುಡಿ ಮತ್ತು ಇಂಗ್ಲಿಷ್ ಎರಡರಲ್ಲೂ ಬರೆಯುವವಳಾಗಿ, ಅನುವಾದದ ಮೂಲಕ ಇತರ ಭಾಷೆಯ ಪದ್ಯ ಮತ್ತು ಗದ್ಯಗಳು ಇಂಗ್ಲಿಷ್‌ನಲ್ಲಿ ಮರುಹುಟ್ಟು ಪಡೆಯುವುದನ್ನು ನೋಡುವುದಕ್ಕೆ ನನಗೆ ಸಂಭ್ರಮವೆನಿಸುತ್ತದೆ. ಸ್ಥಳೀಯ ಭಾಷೆಗಳು ಯಾವಾಗಲೂ ಅಡಿಟಿಪ್ಪಣಿ, ಇಟಾಲಿಕ್ಸ್, ಪದಕೋಶಗಳು ಹಾಗೂ ಹೊಸನುಡಿಗಟ್ಟಗಾಗಿ ಹೆಚ್ಚಿನ ಜಾಗ ಪಡೆಯುತ್ತಿದ್ದರೂ, ಇತ್ತೀಚಿನ ದಿನಮಾನಗಳಲ್ಲಿ ಪುಸ್ತಕೋದ್ಯಮವು ಇಂಗ್ಲಿಷೇತರ ಮತ್ತು ಅನುವಾದಿತ ಕೃತಿಗಳನ್ನ ಹೆಚ್ಚು ಮುಕ್ತವಾಗಿ ಸ್ವೀಕರಿಸುತ್ತಿದೆ. ಇದೇ ಟ್ರೆಂಡ್ ಮುಂದುವರೆದರೆ, ಆಂಗ್ಲೇತರ ಅಂದರೆ ಆಂಗ್ಲ ಭೂ ವಲಯದಾಚೆಗಿನ ಭಾಷಾ ಸಾಹಿತ್ಯಕ್ಕೆ ಹೆಚ್ಚಿನ ಮನ್ನಣೆ ಖಂಡಿತ ಸಿಗಲಿದೆ.

●

**ಬೆರ್ ಅನೇನಾ ಅವರ ಕವಿತೆಗಳು**

# ಒಂದು ನೈತಿಕ ಸಂಬಂಧದಾಚೆಗಿನ ಅನೈತಿಕ ಜಗಳ

ಉದ್ಧಟ ಕತ್ತೆಯಂತೆ
ಮತ್ತೆ ಮತ್ತೆ ನೀ ನನ್ನನ್ನ
ಒಡಿಯುತ್ತಲೇ ಇದ್ದೆ,
ನನ್ನ ಘನತೆ ಕಾಯುತಲಿದ್ದ ಏಕೈಕ
ಬಟ್ಟೆಯನ್ನು ಕಿತ್ತೆಸೆದೆ,
ನನ್ನ ದೇಹದ ಅಂಗಗಳನ್ನು
ನಿನ್ನ ಬೂಟು ನೆಕ್ಕುವವರಿಗೆ
ಹರಿದು ಹಂಚಿದೆ.
ನನ್ನ ಬೆನ್ನ ಹುರಿಯ ಮೇಲೆ ನಿನ್ನ ಸುತ್ತಿಗೆ
ಹುಳುಕು ಹಲ್ಲಿನಂತೆ ಹೊಡೆದುಕೊಳ್ಳುತ್ತಿದೆ.
ಪ್ರತೀ ಬಾರಿ ನಿನ್ನ ಬಾಯಿಗೆ ನಾನು ತುತ್ತಾದಾಗ
ನನ್ನ ಕಂಗಳಲಿ ಕಣ್ಣೀರು ಏನು ಮಾಡುತ್ತಿವೆಯೆಂದು
ತಿಳಿಯಲು ಪೀಡಿಸಿದಾಗ
ನಾನು ತೆವಳುತ್ತಾ ಎಣಿಸುತ್ತೇನೆ
ಇನ್ನೂ ಅದೆಷ್ಟು ಬಾರಿ ನಾನು ಸಾಯಬೇಕು
ಸತ್ತು ಬದುಕಬೇಕು?



ಎಸ್.ವಿ. ಹೂಗಾರ್